


ಎಂಬ ಎರಡು ಸ್ಥಳಗಳು ಇಲ್ಲಿವೆ. ನವ ನರಸಿಂಹ ಕ್ಷೇತ್ರಗಳಿರುವುದು ಪೆದ್ದ ಅಹೋಬಿಲಂನಲ್ಲಿ. ಒಂದು ದಿನದ ಅವಧಿಯಲ್ಲಿಯೇ ನವ ನರಸಿಂಹ ಕ್ಷೇತ್ರ ನೋಡಿದರೆ ಒಳ್ಳೆಯದು. ಆದರೆ ಅದು ಬಹಳ ಕಷ್ಟದ ಕೆಲಸ. ಪಾವನ ನರಸಿಂಹ ಕ್ಷೇತ್ರ ಬಿಟ್ಟರೆ ಉಳಿದೆಲ್ಲ ಕಡೆಗಳಲ್ಲಿ ಬೆಟ್ಟದ ಮೇಲೆ ಕಾಲ್ನಡಿಗೆಯ ಪ್ರಯಾಣ ಅನಿವಾರ್ಯ. ಪಾವನ ನರಸಿಂಹ ಕ್ಷೇತ್ರಕ್ಕೆ ನಡೆದುಕೊಂಡು ಹೋಗಬಹುದಾದರೂ ಅಲ್ಲಿಗೆ ಹೋಗಲು ಚಿನ್ನ ಅಹೋಬಿಲಂನಲ್ಲಿ ಜೀಪುಗಳು ಸಿಗುತ್ತವೆ. ಒಬ್ಬರಿಗೆ 600 ರೂ. ಕಾಡಿನಲ್ಲಿ ಸಾಗುವ ಜೀಪಿನ ಪ್ರಯಾಣ ನರಸಿಂಹ ನಿಗೇ ಪ್ರೀತಿ. ನಡೆದು ಹೋಗುವುದೇ ಸುಖ ಎನಿಸುತ್ತಿತ್ತು.

ಚಿನ್ನ ಅಹೋಬಿಲಂ ಪುಟ್ಟ ಗ್ರಾಮ. ಕೆಲವು ಸಮುದಾಯಗಳ ಛತ್ರಗಳು ಅಲ್ಲಿವೆ. ಆಂಧ್ರಪ್ರದೇಶ ಟೂರಿಸಂನ 'ಹರಿತಾ ಹೋಟೆಲ್' ಇದೆ. ಉಳಿದಂತೆ ಸಣ್ಣಪುಟ್ಟ ಹೋಟೆಲ್‌ಗಳಿವೆ. ಶಾಂತರೂಪಿ ಲಕ್ಷ್ಮೀ ನರಸಿಂಹ ಮೂರ್ತಿ ಹೊಂದಿರುವ ಸುಂದರ ದೇವಾಲಯ ಇಲ್ಲಿದೆ. ಪೆದ್ದ (ದೊಡ್ಡ) ಅಹೋಬಿಲ ಕ್ಷೇತ್ರ ನರಸಿಂಹನ ರುದ್ರಾವತಾರದ ಸ್ಥಳ. ಎರಡೂ ಕ್ಷೇತ್ರಗಳ ನಡುವೆ 8 ಕಿ.ಮೀ. ಅಂತರವಿದೆ. ಒಂಬತ್ತು ಕ್ಷೇತ್ರಗಳನ್ನು ನೋಡಲು ಸಾಧ್ಯವಿಲ್ಲದವರಿಗೆ ಬೆಟ್ಟದ ಬುಡದಲ್ಲಿಯೇ ಪ್ರಹ್ಲಾದ ವರದ ದೇವಾಲಯವಿದೆ.


ಅಹೋಬಿಲ ಪದ ವ್ಯುತ್ಪತ್ತಿಯ ಬಗ್ಗೆ ಎರಡು ಅಭಿಪ್ರಾಯಗಳಿವೆ. ಉಗ್ರರೂಪಿ ನರಸಿಂಹ, ಹಿರಣ್ಯಕಶಿಪುವನ್ನು ಸಂಹಾರ ಮಾಡುವಾಗ ಭಯಗ್ರಸ್ತರಾದ ದೇವತೆಗಳು ಭಕ್ತಿಯಿಂದ 'ಅಹೋ ಬಲಂ' ಎಂದು ಪ್ರಶಂಸಿಸಿದರಂತೆ. ಇನ್ನೊಂದು ಅಭಿಪ್ರಾಯದ ಪ್ರಕಾರ ಅತ್ತ ನರನೂ ಅಲ್ಲದೇ ಇತ್ತ ಪ್ರಾಣಿಯೂ ಅಲ್ಲದ ನರಸಿಂಹ, ಬೃಹತ್ ಗುಹೆಯಲ್ಲಿ (ಬಿಲ) ಅಡಗಿಕೊಂಡಿದ್ದರಿಂದ ಅಹೋಬಿಲಂ ಪದ ಬಂತು. ಕಲ್ಯಾಣದ ಚಾಲುಕ್ಯರು ಈ ದೇವಾಲಯವನ್ನು ನವೀಕರಿಸಿದ ಕುರಿತು ಶಾಸನ ಇಲ್ಲಿದೆ. ಕಳಿಂಗ ಯುದ್ಧ ಗೆದ್ದು ವಿಜಯನಗರ ಅರಸ ಕೃಷ್ಣದೇವರಾಯ ಇಲ್ಲಿಗೆ ಬಂದು ಕಾಣಿಕೆಗಳನ್ನು ನೀಡಿದ ಐತಿಹ್ಯ ಇದೆ.



'ಏರು ಬಾ' ಎಂದು ಸಹೃದಯರನ್ನು ಆಹ್ವಾನಿಸುವಂತಿರುವ ಉಗ್ರಸ್ತಂಭ

ಪ್ರಹ್ಲಾದ ವರದ ದೇವಾಲಯದ ಹಿಂದಿರುವುದು ನಲ್ಲಮಲ್ಲ ಬೆಟ್ಟ ಶ್ರೇಣಿ. ಕಾರಂಡ ನರಸಿಂಹ, ಯೋಗಾ ನರಸಿಂಹ, ಉಗ್ರ ನರಸಿಂಹ, ಮಾಲೋಳ ನರಸಿಂಹ, ಕ್ರೋಧ ನರಸಿಂಹ, ಜ್ವಾಲಾ ನರಸಿಂಹ ಮತ್ತು ಪಾವನ ನರಸಿಂಹ ಕ್ಷೇತ್ರಗಳಿರುವುದು ಇಲ್ಲಿ. ತುತ್ತತುದಿಯಲ್ಲಿ ಉಗ್ರಸ್ತಂಭ. ಸೀಳಿದ ಬಂಡೆಯಂತೆ ಕಾಣುವ ಇಲ್ಲಿಂದಲೇ ನರಸಿಂಹಾವತಾರವಾಯಿತು ಎಂದು ಮಾರ್ಗದರ್ಶಿಗಳು ರೋಚಕವಾಗಿ ವಿವರಿಸುತ್ತಾರೆ. ಉಗ್ರಸ್ತಂಭ ಏರುವುದು ಸ್ವಲ್ಪ ಕಠಿಣ ಹಾದಿ. ಇಲ್ಲಿ ಮೆಟ್ಟಿಲುಗಳಿಲ್ಲ. ಬಂಡೆಗಲ್ಲುಗಳ ಏರುಹಾದಿ. ಏರುವುದಕ್ಕಿಂತ ಇಳಿಯುವುದು ಕಷ್ಟದ ಕೆಲಸ. ಆದರೆ ಉಗ್ರಸ್ತಂಭದ ತುತ್ತ ತುದಿಯೇರಿದಾಗ ದೊರೆಯುವ ಅನುಭೂತಿ ಅನನ್ಯ. ಸುತ್ತಲೂ ಹರಡಿಕೊಂಡ ದಟ್ಟ ಕಾಡುಗಳ ನಡುವೆ ಇಲ್ಲಿಯ ನೋಟ ವಿಭಿನ್ನವಾಗಿ ಕಾಣುತ್ತದೆ.

ಉಗ್ರಸ್ತಂಭದ ಕೆಳಗೆ ಉಗ್ರನರಸಿಂಹ ದೇಗುಲವಿದೆ. ಮಾಲೋಳ ನರಸಿಂಹ ಕ್ಷೇತ್ರಕ್ಕೆ ಸಮೀಪದಲ್ಲಿ



'ಪೆದ್ದ ಅಹೋಬಿಲಂ'ನಲ್ಲಿನ ಒಂದು ಮಂಟಪ

ಪ್ರಹ್ಲಾದನ ಶಿಕ್ಷಣ ನಡೆಯಿತು ಎನ್ನಲಾದ ಸ್ಥಳವೊಂದಿದೆ. ಮೌನವನ್ನೇ ಹೊದ್ದುಕೊಂಡ ಈ ಸ್ಥಳವೆಲ್ಲ ಬಂಡೆಗಳೇ. ಬಂಡೆಯ ನೆಲಹಾಸಿನ ಮೇಲೆ ವಿಚಿತ್ರವಾದ ಲಿಪಿಗಳು ಮತ್ತು ಗೆರೆಗಳಿವೆ. ಎಲ್ಲ ಕ್ಷೇತ್ರಗಳನ್ನು ನಡೆದುಕೊಂಡೇ ನೋಡಬೇಕು. ಕನಿಷ್ಠ ಒಂದು ದಿನ ಮೀಸಲಿಡಬೇಕಾಗುತ್ತದೆ.

ಪಾವನ ನರಸಿಂಹ ಕ್ಷೇತ್ರದ ಹಾದಿಯಲ್ಲಿ ಜೀಪಿನಲ್ಲಿ ಜೊತೆಯಾದವರು ಯಾಗಂಟಿ ದೇವಾಲಯದ ಕುರಿತು ಮಾಹಿತಿ ನೀಡಿದರು. ಇದೂ ಕರ್ನೂಲು ಜಿಲ್ಲೆಯಲ್ಲಿರುವ ಉಮಾ ಮಹೇಶ್ವರ ದೇವಾಲಯ. ಏಳು ದಿನಗಳ ಒಂಟಿ ಸವಾರಿಯಲ್ಲಿ ಇದೂ ಸೇರ್ಪಡೆಯಾಯಿತು. ಒಟ್ಟು 7 ದಿನಗಳ 1300 ಕಿ.ಮೀ. ಪ್ರಯಾಣದಲ್ಲಿ ಪುಟ್ಟಪರ್ತಿ, ಅಹೋಬಿಲ, ಮಹಾನಂದಿ, ನಂದ್ಯಾಲ, ಶ್ರೀಶೈಲ, ಯಾಗಂಟಿ, ಬೇಲಂ ಗುಹೆಗಳು ಮತ್ತು ಗಂಡಿಕೋಟದ ಮನೋಹರ ನೋಟ ಉತ್ಸಾಹವನ್ನು ಇಮ್ಮಡಿಗೊಳಿಸಿದವು.

## ತಲುಪುವುದು ಹೇಗೆ?

ಬೆಂಗಳೂರಿನಿಂದ ಅಹೋಬಿಲಕ್ಕೆ ಎರಡು ರಸ್ತೆ ಮಾರ್ಗಗಳಿವೆ. ಪುಟ್ಟಪರ್ತಿ– ಪುಲಿವೆಂಡುಲ – ಜಮ್ಮಲಮಡಗು – ಅಲ್ಲಗಡ್ಡ ಮೂಲಕ ಹೋಗಬಹುದು. ಮದನಪಲ್ಲಿಕಡಪ ಮೂಲಕವೂ ಹೋಗಬಹುದು. ಎರಡೂ ಮಾರ್ಗಗಳಲ್ಲಿ ದೂರ ಸುಮಾರು 340 ಕಿ.ಮೀ. ಆದರೆ ಮೊದಲು ಹೇಳಿದ ಮಾರ್ಗದ ಅವಧಿ ಕಡಿಮೆ. ಬೈಕ್ ಸವಾರಿಗೂ ಇದು ಒಳ್ಳೆಯದು.

ಸೌಲಭ್ಯಗಳೆಲ್ಲ ಇರುವುದು ಕೆಳಗಿರುವ ಚಿನ್ನ ಅಹೋಬಿಲದಲ್ಲಿ. ಆದರೆ ಇಲ್ಲಿ ಆಂಧ್ರ ಟೂರಿಸಂ ಹೋಟೆಲ್ ಬಿಟ್ಟರೆ ವಿಲಾಸಿ ವಸತಿ ಸೌಲಭ್ಯವಿಲ್ಲ. ವಿವಿಧ ಸಮುದಾಯಗಳ ಸಾಧಾರಣ ಛತ್ರಗಳಿವೆ. ಅದೂ ಆ ಸಮುದಾಯದ ಜನರಿಗೆ ಆದ್ಯತೆ. 30 ಕಿ.ಮೀ. ದೂರದಲ್ಲಿರುವ ಅಲ್ಲಗಡ್ಡದಲ್ಲಿ ಒಂದಿಷ್ಟು ಹೋಟೆಲ್‌ಗಳಿವೆ. ಕ್ರೋಧ ನರಸಿಂಹ ಕ್ಷೇತ್ರದಲ್ಲಿ ಬೆಳಿಗ್ಗೆ 9ರಿಂದ ರಾತ್ರಿ 9ರವರೆಗೆ ರುಚಿಕರವಾದ ಉಚಿತ ಪ್ರಸಾದ ವ್ಯವಸ್ಥೆ ಇದೆ.